**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ.ನಂಃ 4573/2024 ಸಿ.ಡಬ್ಲ್ಯೂ–18 ಪಿ.ಡಬ್ಲ್ಯೂ–4

| | | |
|---|---|---|
| ಹೆಸರು | ಃ | ಮಂಜುನಾಥ |
| ತಂದೇಃಗಂಡ | ಃ | ನಾರಾಯಣಯಪ್ಪ |
| ವಯಸ್ಸು | ಃ | 40 ವರ್ಷ |
| ಉದ್ಯೋಗ | : | ಪಿ.ಐ, ದೇವದುರ್ಗ |
| ವಾಸಸ್ಥಳ | ಃ | ದೇವದುರ್ಗ |

ದಿನಾಂಕಃ 25.10.2025
ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸ:ಸ:ಅ ಅವರಿಂದಃ**

ನಾನು ಅಗಷ್ಟ ೨೦೨೦ ರಿಂದ ಜೂನ್ 2022 ರವರೆಗೆ ಆಳಂದ ಸಿ.ಪಿ.ಐ ಅಂತಾ ಕಾರ್ಯ ನಿರ್ವಹಿಸಿದ್ದೇನೆ.

ದಿಃ 14-03-2021 ರಂದು ಚಾಸಾ 17 ರವರ ಕಡೆಯಿಂದ ಕಡತವನ್ನು ಪಡೆದುಕೊಂಡು, ಪರಿಶೀಲನೆ ಮಾಡಿ ಅದೇ ದಿನ ಸರ್ಕಾರಿ ಆಸ್ಪತ್ರೆ ಆಳಂದಕ್ಕೆ ಭೇಟಿ ಮೃತ ವಿನೋದಕುಮಾರವರ ಶವ ಪಂಚನಾಮೆಯನ್ನು ಚಾಸಾ 1 ರವರ ಸಮಕ್ಷಮ ಬೆ. 6.00 ಯಿಂದ 7.00 ಗಂಟೆಯವರೆಗೆ ಚಾಸಾ 2 ಮತ್ತು 3 ರವರ ಸಮಕ್ಷಮದಲ್ಲಿ ಕೈಕೊಂಡು ಶವಪರೀಕ್ಷೆ ಕುರಿತು ಮೃತ ದೇಹವನ್ನು ವೈದ್ಯಾಧಿಕಾರಿಗಳು ಸರ್ಕಾರಿ ಆಸ್ಪತ್ರೆಯವರಿಗೆ ವಹಿಸಿರುತ್ತೇನೆ. ಅದೇ ದಿನ ಗುನ್ನಾ ಸ್ಥಳಕ್ಕೆ ಭೇಟಿ ನೀಡಿ ಚಾಸಾ 1 ರವರು ತೋರಿಸಿದ ಗುನ್ನಾ ಸ್ಥಳವನ್ನು ಚಾಸಾ 4 ಮತ್ತು 5 ರವರ ಸಮಕ್ಷಮ ಗುನ್ನಾ ಸ್ಥಳದ ಪಂಚನಾಮೆಯನುನ ಬೆ. 8.00 ರಿಂದ 9.00 ವರೆಗೆ ಕೈಗೊಂಡು ಸ್ಥಳದಲ್ಲಿ ಅಪಘಾತ ಪಡಿಸಿದ ಲಾರಿ ನಂಬರ ಕೆ ಎ 28/ಸಿ-7665 ಇದನ್ನು ಜಪ್ತಿ ಪಡಿಸಿಕೊಂಡು, ಅದೇ ದಿನ ಚಾಸಾ 8 ರಿಂದ 12 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ಚಾಸಾ 15 ಮತ್ತು 16 ರವರು ನೀಡಿದ ವರದಿಗಳನ್ನು ಪಡೆದು ಕೊಂಡಿರುತ್ತೇನೆ. ದಿಃ 19-03-2021 ರಂದು 1 ನೇ ಆರೋಪಿಯನ್ನುದಸ್ತಗೀರ ಮಾಡಿ ನಿಯಮಾವಳಿ ಪಾಲಿಸಿ ಸೂಕ್ತ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ದಿಃ 25-03-2021 ರಂದು ಮೃತ ಪಿ. ಎಮ. ಎ. ವರದಿಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿಃ 12-04-2021

ರಂದು ಅಪಘಾತ ಪಡಿಸಿದ ವಾಹನದ ಐ.ಎಮ.ವಿ ವರದಿಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ, ದಿಃ 30-04-2021 ರಂದು ಅಪಘಾತ ಪಡಿಸಿದ ವಾಹನವನ್ನು ನ್ಯಾಯಾಲಯದ ಆದೇಶದ ಪ್ರಕಾರ ಪಂಚನಾಮೆ ಮಾಡಿ ಬಿಡುಗಡೆ ಮಾಡಿರುತ್ತೇನೆ ಮತ್ತು ಅದೇ ದಿನ, ತನಿಖೆ ಪೂರ್ಣಗೊಂಡ ಕಾರಣ ಆರೋಪಿತರ ವಿರುದ್ದ ಸಾಕಷ್ಟು ಸಾಕ್ಷಾಧಾರಗಳು ಕಂಡು ಬಂದ ಕಾರಣ ಆರೋಪಿತರ ವಿರುದ್ದ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ.

ಸಾಕ್ಷಿಯು ನಿಪಿ. 4 ರಲ್ಲಿ ಇರುವ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 4 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ. 3 ರಲ್ಲಿ ಇರುವ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 3 (ಬಿ ಎಂದು ಗುರುತಿಸಲಾಯಿತು. ದಿಃ 14-03-2021 ರಂದು ಪಡೆದ ವರದಿಗಳನ್ನು ನಿಪಿ. 5 ಮತ್ತು 6 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಗಳನ್ನು ನಿಪಿ. 5 ಎ ಮತ್ತು 6 ಎ ಅಂತಾ ಗುರುತಿಸಲಾಯಿತು. ಶವಪರೀಕ್ಷಾ ವರದಿಯನ್ನು ಆರೋಪಿತರ ವಕೀಲರು ತಕರಾರು ಮಾಡಿದ ಕಾರಣ ಅದನ್ನು ನಿಪಿ. 7 ಎಂದು ಗುರುತಿಸಲಾಯಿತು. ಸಾಕ್ಷಿಯು ಸಹಿಯನ್ನು ನಿಪಿ. 7(ಎ) ಅಂತಾ ಗುರುತಿಸಲಾಯಿತು. ಐ.ಎಮ.ವಿ ವರದಿಯನ್ನು ನೋಡಿ ಗುರುತಿಸಿದ ಕಾರಣ ಅದನ್ನು ನಿಪಿ. 8 ಎಂದು ಗುರುತಿಸಲಾಯಿತು. ಸಾಕ್ಷಿಯು ಸಹಿಯನ್ನು ನಿಪಿ. 8 (ಎ) ಅಂತಾ ಗುರುತಿಸಲಾಯಿತು. ವಾಹನ ಬಿಡುಗಡೆ ಕಾಲಕ್ಕೆ ಮಾಡಿದ ಪಂಚನಾಮೆಯನ್ನು ನೋಡಿ ಗುರುತಿಸಿದ ಕಾರಣ ಅದನ್ನು ನಿಪಿ 9 ಅಂತ ಗುರುತಿಸಲಾಯಿತು. ಸಾಕ್ಷಿಯು ಸಹಿಯನ್ನು ನಿಪಿ. 9(ಎ) ಅಂತಾ ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದಲ್ಲಿ ಇರುವ 1 ನೇ ಆರೋಪಿಯನ್ನು ನೋಡಿ ಗುರುತಿಸುತ್ತಾರೆ.

**<u>ಪಾಟೀ ಸವಾಲು ಆರೋಪಿತರ ಪರ ಶ್ರೀ. ಎಮ ವಿ ಇ ವಕೀಲರಿಂದಃ</u>**

ಅಂತಿಮ ವರದಿಯನ್ನು ಸಲ್ಲಿಸುವ ಮುಂಚೆ ನಾನು ಕಡತವನ್ನು ಪರಿಶೀಲನೆ ಮಾಡಿರುತ್ತೇನೆ. ನಿಪಿ. 1 ರಲ್ಲಿ ಇದ್ರೇಷಿ ತಂದೆ ಆಯುಬ ಅನ್ಸಾರಿ ಮತ್ತು ಸುಲ್ತಾನ ತಂದೆ ಫಾರುಕ ಖುರೇಷಿ ಅವರ ಸಹಾಯದಿಂದ ಮುಂದಿನ ಕ್ರಮಕ್ಕಾಗಿ ಶವವನ್ನು ತೆಗೆದುಕೊಂಡು ಹೋಗಿರುತ್ತೇವೆ ಅಂತಾ ನಮೂದು ಇದ್ದು ಸದರಿರವರ ಹೇಳಿಕೆಗಳನ್ನು ನಾನು ಪಡೆದಿರುವುದಿಲ್ಲ. ಆಳಂದ ಬಸ್ಸ ನಿಲ್ದಾಣದ ಮುಂದೆ ಇರುವ ರಸ್ತೆಯು ರಾಜ್ಯ ಹೆದ್ದಾರಿ ಎಂದರೆ ಸರಿ. ಸದರಿ ರಸ್ತೆಯ ಪೂರ್ವ ಮತ್ತು ಪಶ್ಚಿಮ ಭಾಗದಲ್ಲಿ

ಎ.ಪಿ.ಎಮ.ಸಿ ಗೇ ಸಂಬಂಧಿಸಿದ ಗೋದಾಮುಗಳು ಇರುತ್ತವೆ ಎಂದರೆ ಸರಿ. ಮೃತ ವ್ಯಕ್ತಿ ಗೋದಾಮಿನಲ್ಲಿ ಕೆಲಸ ಮಾಡುತ್ತಿದ್ದ ಬಗ್ಗೆ ನಾನು ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ. ಅದೇ ರೀತಿ ಸದರಿ ವ್ಯಕ್ತಿಯು ಯಾವ ಗೋದಾಮಿನಲ್ಲಿ ಕೆಲಸ ಮಾಡುತ್ತಿದ್ದನು ಎಂಬುವುದರ ಬಗ್ಗೆ ಹೇಳಿಕೆಗಳನ್ನು ಪಡೆದುಕೊಂಡಿರುವುದಿಲ್ಲ. ಚಾಸಾ 8 ಮೃತ ವ್ಯಕ್ತಿಗೆ ಯಾವ ರೀತಿ ಸಂಬಂಧ ಆಗಬೇಕು ಅಂತಾ ನನಗೆ ಹೇಳಲು ಬರುವುದಿಲ್ಲ. ಚಾಸಾ 1 ಮತ್ತು 9 ಸಹೋದರರು ಇದ್ದು ಅವರಿಗೆ ಮತ್ತು ಮೃತ ವ್ಯಕ್ತಿಯ ಮಧ್ಯ ವೈರತ್ವಗಳು ಇದ್ದ ಬಗ್ಗೆ ನನಗೆ ಗೊತ್ತಿಲ್ಲ. ನಾನು ಚಾಸಾ 8 ರಿಂದ 12 ರವರ ಹೇಳಿಕೆಗಳನ್ನು ಯಾವ ಸಮಯದಲ್ಲಿ ತೆಗೆದುಕೊಂಡಿರುತ್ತೇನೆ ಅಂತಾ ಹೇಳಲು ನೆನಪು ಇರುವುದಿಲ್ಲ. ಆಳಂದ ಬಸ್ಸ ನಿಲ್ದಾಣದ ಮುಂದೆ ಕಲುಬುರಗಿಗೆ ಹೋಗುವ ರಾಜ್ಯ ಹೆದ್ದಾರಿ ಇರುತ್ತದೆ ಎಂದರೆ ಸರಿ. ರಸ್ತೆ ಮಧ್ಯೆ ವಿಭಜಕ ಇದ್ದು, ಕಲುಬುರಗಿಯಿಂದ ಬರುವ ಬಸ್ಸುಗಳು ಬಸ್ಸ ನಿಲ್ದಾಣದ ಎದುರುಗಡೆ ಇರುವ ರಸ್ತೆಯ ಮುಖಾಂತರ ನಿಲ್ದಾಣದ ಒಳಗೆ ಹೋಗುತ್ತವೆ ಎಂದರೆ ಸರಿ. ಸದರಿ ರಸ್ತೆಗೆ ಹತ್ತಿಕೊಂಡು ಇರುವ ರಸ್ತೆಯ ಮುಖಾಂತರ ಆಳಂದದಿಂದ ಕಲಬುರಗಿಗೆ ಬಸ್ಸುಗಳು ಹೊಗುತ್ತವೆ ಎಂದರೆ ಸರಿ. ರಸ್ತೆಯ ಎರಡು ಬದಿಯಲ್ಲಿ APMC ಮಳಿಗೆಗಳು ಇರುತ್ತವೆ ಎಂದರೆ ಸರಿ. ಪಶ್ಚಿಮ ಭಾಗದಲ್ಲಿ APMC ಕಚೇರಿ ಇರುತ್ತದೆ ಎಂದರೆ ಸಾಕ್ಷಿಯು ಪೂರ್ವಕ್ಕೆ ಇರುತ್ತದೆ ಅಂತಾ ನುಡಿಯುತ್ತಾರೆ. ಸಾಕ್ಷಿಗೆ ಈಗ ನಿಪಿ. 2 ನ್ನು ತೋರಿಸಿದ ಸದರಿ ದಾಖಲೆಯ ಪ್ರಕಾರ ಪಶ್ಚಿಮ ಭಾಗದಲ್ಲಿ APMC ಕಚೇರಿ ಬರುತ್ತದೆ ಎಂದರೆ ಸಾಕ್ಷಿಯ ಸದರಿ ದಾಖಲೆಯನ್ನು ನೋಡಿ ಸರಿ ಅಂತಾ ನುಡಿಯುತ್ತಾರೆ. ಸದರಿ ಬಸ್ಸ ನಿಲ್ದಾಣದ ಎದುರುಗಡೆ ರಸ್ತೆಯು ಯಾವಾಗಲೂ ಜನ ಸಂದಣಿಯಿಂದ ಇರುತ್ತದೆ ಎಂದರೆ ಸರಿ. ಅಲ್ಲಿ ಯಾವಾಗಲೂ ಪೋಲಿಸರು ಇರುತ್ತಾರೆ ಎಂದರೆ ಸರಿ. ಬಸ್ಸ ನಿಲ್ದಾಣದ ದಕ್ಷಿಣ ದಿಕ್ಕಿಗೆ ಹೊಂದಿಕೊಂಡು APMC ಮಳಿಗೆಗಳು ಇರುತ್ತವೆ ಎಂದರೆ ಸರಿ. ಸದರಿ ಮಳಿಗೆಗೆಗಳು ಜೂನಿಯರ್ ಕಾಲೇಜವರೆಗೂ ಇರುತ್ತವೆ ಎಂದರೆ ಸರಿ. ಕಲುಬುರಗಿಯಿಂದ ಬಸ್ಸುಗಳು ಹಳೆಯ ಚೆಕ ಪೋಸ್ಟ ಹತ್ತಿರ ಇರುವ ಜಂಪ ದಾಟಿ ಬರಬೇಕು ಎಂದರೆ ಸರಿ. ಅದೇ ರೀತಿ ಎಸ್ ಆರ್ ಜಿ ಪೇಟ್ರೋಲ್ ಬಂಕ ಹತ್ತಿರ ಒಂದು ಜಂಪ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಎಸ್ ಐ.ಬಿ. ಮುಂದುಗಡೆ ಒಂದು ಜಂಪ ಇರುತ್ತದೆ ಎಂದರೆ ಸರಿ. ಅದೇ ರೀತಿ ದರ್ಗಾ ಕ್ರಾಸ್ ಹತ್ತಿರ

ಒಂದು ಜಂಪ  ಇರುತ್ತದೆ ಎಂದರೆ  ಸರಿ. ದರ್ಗಾ ಕ್ರಾಸ ಹತ್ತಿರ ಒಂದು ದಾರಿ ದರ್ಗಾಕ್ಕೆ ಹೋಗಲು ಇನ್ನೊಂದು ದಾರಿ ಹಳೆಯ ಆಳಂದ ಪಟ್ಟಣಕ್ಕೆ ಹೋಗುತ್ತದೆ ಎಂದರೆ ಸರಿ. ಸ್ವಲ್ಪ ಮುಂದೆ ಹೋದರೆ ಪೋಲಿಸ್ ಠಾಣೆಗೆ ಹೊಗುವ ದಾರಿ ಇರುತ್ತದೆ ಎಂದರೆ ಸರಿ. ಸದರಿ ದಾರಿಯಲ್ಲಿ ಒಂದು ಜಂಪ ಇರುತ್ತದೆ ಎಂದರೆ ಸರಿಯಲ್ಲ,  ಸರ್ಕಾರಿ ಜೂನಿಯರ ಕಾಲೇಜ ಎದುರುಗಡೆ ಒಂದು ಜಂಪ ಇರುತ್ತದೆ ಎಂದರೆ ಸರಿಯಲ್ಲ.  ಸಾಮಾನ್ಯವಾಗಿ ವಾಹನಗಳು ಜೂನಿಯರ ಕಾಲೇಜ ಎದುರುಗಡೆಯಿಂದ ಹೋಗಬೇಕಾದರೆ ರಸ್ತೆಯ ಎಡಕ್ಕೆ ಹೋಗಬೇಕು ಎಂದರೆ ಸರಿ.  ಜೂನಿಯರ ಕಾಲೇಜ ಎದುರುಗಡೆ ಇರುವ ಟಾರ ರಸ್ತೆಯ ಎಡಗಡೆ ಡ್ರೈನೇಜ ಇದ್ದು  ಅದರ ಮೇಲೆ ಮುಚ್ಚಳಿಕೆ ಇದ್ದು ನಂತರ ಖುಲ್ಲಾ ಜಾಗ ಇದ್ದು, ಅದಾದ ಮೇಲೆ APMC  ಮಳಿಗೆಗಳು ಇರುತ್ತವೆ ಎಂದರೆ ಸರಿ.

2. ಚಾಸಾ 9 ರವರ ಸಾಕ್ಷಿಯಲ್ಲಿ ಘಟನೆ ಆದಾಗ  ಚಾಸಾ 10 ರವರು ತೆಲಕುಣಿಯಲ್ಲಿ ಇದ್ದರು ಅಂತಾ ಹೇಳಿರುತ್ತಾರೆ ಎಂದರೆ  ನನಗೆ ಗೊತ್ತಿಲ್ಲ. ನಾನು ಅಗಷ್ಟ ೨೦೨೦ ರಿಂದ ಜೂನ್ 2022 ರವರೆಗೆ ಆಳಂದ ಸಿ.ಪಿ.ಐ ಅಂತಾ  ಕಾರ್ಯ ನಿರ್ವಹಿಸಿದ್ದೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.  ದಿಃ 14-03-2021 ರಂದು ಚಾಸಾ 17 ರವರ ಕಡೆಯಿಂದ ಕಡತವನ್ನು ಪಡೆದುಕೊಂಡು, ಪರಿಶೀಲನೆ ಮಾಡಿ ಅದೇ ದಿನ ಸರ್ಕಾರಿ ಆಸ್ಪತ್ರೆ ಆಳಂದಕ್ಕೆ ಭೇಟಿ  ಮೃತ ವಿನೋದಕುಮಾರವರ ಶವ ಪಂಚನಾಮೆಯನ್ನು ಚಾಸಾ 1 ರವರ ಸಮಕ್ಷಮ ಬೆ. 6.00 ಯಿಂದ 7.00 ಗಂಟೆಯವರೆಗೆ ಚಾಸಾ 2 ಮತ್ತು 3 ರವರ ಸಮಕ್ಷಮದಲ್ಲಿ  ಕೈಕೊಂಡು ಶವಪರೀಕ್ಷೆ ಕುರಿತು ಮೃತ ದೇಹವನ್ನು ವೈದ್ಯಾಧಿಕಾರಿಗಳು ಸರ್ಕಾರಿ ಆಸ್ಪತ್ರೆಯವರಿಗೆ ವಹಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ದಿನ ಗುನ್ನಾ ಸ್ಥಳಕ್ಕೆ ಭೇಟೆ ನೀಡಿ ಚಾಸಾ 1 ರವರು ತೋರಿಸಿದ ಗುನ್ನಾ ಸ್ಥಳವನ್ನು ಚಾಸಾ 4 ಮತ್ತು 5 ರವರ ಸಮಕ್ಷಮ ಗುನ್ನಾ ಸ್ಥಳದ ಪಂಚನಾಮೆಯನುನ ಬೆ. 8.00 ರಿಂದ 9.00 ವರೆಗೆ ಕೈಗೊಂಡು ಸ್ಥಳದಲ್ಲಿ ಅಪಘಾತ ಪಡಿಸಿದ ಲಾರಿ ನಂಬರ ಕೆ ಎ 28/ಸಿ-7665 ಇದನ್ನು ಜಪ್ತಿ ಪಡಿಸಿಕೊಂಡು, ಅದೇ ದಿನ ಚಾಸಾ 8 ರಿಂದ 12 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.  ಅದೇ ದಿನ ಚಾಸಾ 15 ಮತ್ತು 16 ರವರು ನೀಡಿದ ವರದಿಗಳನ್ನು ಪಡೆದುಕೊಂಡಿರುತ್ತೇನೆ.  ದಿಃ 19-03-2021 ರಂದು 1 ನೇ ಆರೋಪಿಯನ್ನುದಸ್ತಗೀರ

ಮಾಡಿ ನಿಯಮಾವಳಿ ಪಾಲಿಸಿ ಸೂಕ್ತ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 25-03-2021 ರಂದು ಮೃತ ಪಿ. ಎಮ. ಎ. ವರದಿಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿಃ 12-04-2021 ರಂದು ಅಪಘಾತ ಪಡಿಸಿದ ವಾಹನದ ಐ.ಎಮ.ವಿ ವರದಿಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ, ದಿಃ 30-04-2021 ರಂದು ಅಪಘಾತ ಪಡಿಸಿದ ವಾಹನವನ್ನು ನ್ಯಾಯಾಲಯದ ಆದೇಶದ ಪ್ರಕಾರ ಪಂಚನಾಮೆ ಮಾಡಿ ಬಿಡುಗಡೆ ಮಾಡಿರುತ್ತೇನೆ ಮತ್ತು ಅದೇ ದಿನ, ತನಿಖೆ ಪೂರ್ಣಗೊಂಡ ಕಾರಣ ಆರೋಪಿತರ ವಿರುದ್ದ ಸಾಕಷ್ಟು ಸಾಕ್ಷಾಧಾರಗಳು ಕಂಡು ಬಂದ ಕಾರಣ ಆರೋಪಿತರ ವಿರುದ್ದ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇರುವುದಿಲ್ಲ.</u>

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ